# ಪದರುಗಳು ಪ್ರತಿಕ್ರಿಯೆ

### ಕಾದಂಬರಿ ಓದಿ ಭಾವುಕಳಾದೆ

ವಿವೇಕಾನಂದ ಕಾಮತ್ ಅವರ ಧಾರಾವಾಹಿ 'ಪದರುಗಳು' ಬಹಳ ಚೆನ್ನಾಗಿತ್ತು. ಮನಸ್ಸಿನ ಪದರುಗಳು ಪ್ರತಿವಾರ ಒಂದೊಂದು ತರದಲ್ಲಿ ತೆರೆದುಕೊಂಡವು. ಧಾರಾವಾಹಿಯ ಕೊನೆಯ ಕಂತುಗಳನ್ನು ಓದುತ್ತಾ ಓದುತ್ತಾ ಕಣ್ಣೀರು ಬಂದಿದ್ದು ಸುಳ್ಳಲ್ಲ. ನಮ್ಮ ಮನೆಯಲ್ಲಿಯೇ ಇಂತಹ ಘಟನೆ ಆಗಿದೆಯಾ ಅನ್ನಿಸುತ್ತದೆ.

–ಮೇಘನಾ ರಘುನಂದನ್, ಹೂವಿನ ಹಡಗಲಿ

### ಮನಸೆಳೆದ ಮಾನಸಿಕ ವಿಶ್ಲೇಷಣೆ

ಧಾರಾವಾಹಿ ಅತ್ಯಂತ ಕುತೂಹಲಕಾರಿಯಾಗಿತ್ತು. ಮಾನಸಿಕ ತಜ್ಞರೊಬ್ಬರು ನಿರೂಪಣೆ ಮಾಡಿದಂತಿತ್ತು. ಮಡದಿಯೇ ಗಂಡನನ್ನೂ ಮಾನಸಿಕ ತಜ್ಞರಲ್ಲಿ ಕೊಂಡೊಯ್ದರೂ ತಾನೇ ಚಿಕಿತ್ಸೆಗೊಳಗಾಗಿದ್ದು ಒಂದು ರೀತಿಯ ವಿಸ್ಮಯ.

–ಶಶಿಧರ ಎಲೆ, ಬೆಂಗಳೂರು

### ಸ್ಪರ್ಶದ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ಅಗತ್ಯ

ಹೆಣ್ಣಾಗಲಿ, ಗಂಡಾಗಲಿ ಮಕ್ಕಳು ಚಿಕ್ಕವರಿದ್ದಾಗ ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ಮಾಹಿತಿ ನೀಡುವುದು ಅತ್ಯಂತ ಅವಶ್ಯಕ. ಏನೂ ಅರಿಯದ ಮುಗ್ಧ ಮಕ್ಕಳ ಮೇಲೆ ಈ ರೀತಿಯ ಅತ್ಯಾಚಾರವಾದಾಗ, ಆ ಒಂದು ಘಟನೆ ಅವರ ಬಾಳನ್ನೇ ಹೊಸಕಿ ಹಾಕಬಹುದು. ತಂದೆ–ತಾಯಿ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯ. ಧಾರಾವಾಹಿಯಲ್ಲಿ ಲೇಖಕರು ಮನೋವೈಜ್ಞಾನಿಕ ಚಿಕಿತ್ಸೆಯ ವಿವಿಧ ಹಂತಗಳನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಈ ಥೀಮ್ ಇಟ್ಟುಕೊಂಡು ಬರೆದ ನನ್ನದೊಂದು ಕಥೆಗೆ ಬಹುಮಾನ ಸಿಕ್ಕಿದ್ದು ನೆನಪಾಯಿತು.

–ಪುಷ್ಪಾ ಹಾಲಭಾವಿ, ಧಾರವಾಡ

### ನೆನಪಾದರು ತ್ರಿವೇಣಿ

ಒಂದು ಸುಂದರ ಧಾರಾವಾಹಿ. ಮನೋವೈಜ್ಞಾನಿಕ ನೆಲೆಗಟ್ಟಿನ, ನಾವು ಓದುತ್ತಿದ್ದ ತ್ರಿವೇಣಿಯವರ ಕಥೆಗಳನ್ನು ನೆನಪಿಸಿತು. ಪ್ರದೀಪ್ ಪಾತ್ರ ಚೆನ್ನಾಗಿ ಬಂದಿದೆ.

–ವಿಜಯಾ ಪ್ರಸಾದ್, ಬೆಂಗಳೂರು

### ನಿವೇದಿತಾರ ಸಂಖ್ಯೆಗೆ ಲೆಕ್ಕವಿದೆಯೆ?

ಹತ್ತು ಕಂತುಗಳಲ್ಲಿ ಮೂಡಿ ಬಂದ 'ಪದರುಗಳು' ನಿಜವಾಗಿಯೂ ಮನಸ್ಸೆಂಬ ಗೂಡಿನ ಒಳ ಅಂಗಣವನ್ನು ಪದರು ಪದರಾಗಿ ಬಿಚ್ಚಿ ನಮ್ಮ ಮುಂದೆ ಇಟ್ಟಿದೆ. ಒಳಿತುಕೆಡುಕುಗಳು ಬಾಧಿಸುವುದಕ್ಕೆ, ನಮ್ಮ ಮನಸ್ಸು ಹೇಗೆ ಕಾರಣ ಎಂಬುದನ್ನು ಎಳೆ ಎಳೆಯಾಗಿ ಹೆಣೆದು ಕಟ್ಟಿಕೊಟ್ಟಿದ್ದಾರೆ.

ಸಮಾಜದ ಕಟ್ಟುಪಾಡು, ನೀತಿ ರಿವಾಜುಗಳಿಗೆ ಬಹಳ ಮಹತ್ವ ನೀಡುವ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ, ಜೀವನದಲ್ಲಿ ಘಟಿಸಿದ ಕೆಲವೊಂದು ಘಟನೆಗಳು ಮಾನ, ಮರ್ಯಾದೆ, ಗೌರವ ಎಂಬ ಬಿಗಿ ಬಂಧನದ ಕಾರಣದಿಂದ ಆಚೆ ನುಸುಳಲು ಕಷ್ಟಪಡುತ್ತವೆ. ಅಂತಹ ಸಂದರ್ಭಗಳಲ್ಲಿ ಈ ಘಟನೆಯ ನೆನಪು ಅವಶೇಷಗಳಾಗುತ್ತಾವೇನೋ ಎಂಬ ಭ್ರಮೆಯಿಂದ ಈ ರೀತಿ ಮನದ ಪದರುಗಳಲ್ಲಿ ಹೂತುಹಾಕಲು ಪ್ರಯತ್ನ ನಡೆಯುತ್ತಲೇ ಇರುತ್ತದೆ.

ಮನದ ಪದರುಗಳು ಜ್ವಾಲಾಮುಖಿಗಳು, ಯಾವಾಗ ಮೇಲೆ ಬಂದು ಎಗರುತ್ತವೆಯೋ ಗೊತ್ತೇ ಆಗುವುದಿಲ್ಲ. ಪದರುಗಳಲ್ಲಿನ ನಿವೇದಿತಾಳ ಜೀವನ ಸುಖಾಂತ್ಯ ಕಂಡಿತು. ಆದರೆ ಸಮಾಜದಲ್ಲಿ ಈ ರೀತಿಯ ಎಷ್ಟೋ ನಿವೇದಿತರು ತಮ್ಮೊಳಗಿನ ಜ್ವಾಲಾಮುಖಿಯ ಜ್ವಾಲೆಗೆ ಸಿಲುಕಿ ಬೆಂದುಹೋಗುತ್ತಿದ್ದಾರೋ, ಬಲ್ಲವರಾರು?

ಈ ಧಾರಾವಾಹಿ ಮೂಲಕ ಮನಸ್ಸಿನಲ್ಲಿ ಅಡಗಿರುವ ಜ್ವಾಲಾಮುಖಿಯ ಪರಿಚಯ ಮಾಡಿಕೊಡುತ್ತಾ, ಇದನ್ನು ತಣ್ಣಗಾಗಿಸುವ ಪರಿಯನ್ನು ಹೇಳಿಕೊಡಲಾಗಿದೆ. ಕೆಲವು ವಿಷಯಗಳನ್ನು ಘಟಿಸಿದ ಸಂದರ್ಭಗಳಲ್ಲೇ ಹೊರ ಹಾಕಿದಲ್ಲಿ ಮುಂದೆ ಜ್ವಾಲಾಮುಖಿಗಳ ಮುಖಾಮುಖಿ ತಪ್ಪಿಸಬಹುದೆಂಬ ನೀತಿ ಕಲಿಸಿದ ಕಥೆ ಇದು.

–ವೈಶಾಲಿ ನರಹರಿ ರಾವ್

### ಮೋನಪ್ಪ ಅವರ ಚಿತ್ರಗಳ ಸೊಗಸು

ಚಿಕ್ಕದಾಗಿ ಸುಂದರವಾಗಿ ಮೂಡಿಬಂತು. ಮನೋವೈಜ್ಞಾನಿಕ ನೆಲೆಗಟ್ಟಿನ ಇದು ನಾವು ಓದುತ್ತಿದ್ದ ತ್ರಿವೇಣಿಯವರ ಕಥೆಗಳನ್ನು ನೆನಪಿಗೆ ತಂದಿತು. ಪ್ರದೀಪ್ ಪಾತ್ರ ಚೆನ್ನಾಗಿ ಬಂದಿದೆ. ಮೋನಪ್ಪ ಅವರ ಚಿತ್ರಗಳೂ ಆತ್ಯಾಕರ್ಷಕವಾಗಿದ್ದವು.

–ಪ್ರಸಾದ್, ಬೆಂಗಳೂರು

### ಮನಸ್ಸಿಗೆ ಹಿತ

ಆರಂಭದಿಂದಲೂ ಕುತೂಹಲ ಮೂಡಿಸುತ್ತ ಬಂದ ಈ ಧಾರಾವಾಹಿ ಪ್ರತಿ ವಾರವೂ ಓದಲು ಕಾತುರದಿಂದ ಕಾಯುವಂತೆ ಮಾಡಿತು. ನಿವೇದಿತಾಳ ಬಾಳು ಪ್ರಜ್ವಲಿಸುವಂತೆ ಮಾಡುವಲ್ಲಿ ಪತಿ ಪ್ರದೀಪನ ಸಹನೆ, ಸಹಕಾರ ದೊಡ್ಡದು. ಒಟ್ಟಿನಲ್ಲಿ ಚಿಕ್ಕದಾಗಿದ್ದರೂ ಚೊಕ್ಕವಾದ ಈ ಧಾರಾವಾಹಿ ಸುಖಾಂತ್ಯದೊಂದಿಗೆ ಮನಸ್ಸಿಗೆ ಹಿತ ನೀಡಿತು.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ,
ಭಾರತೀ ಗಂಗಾಧರ್, ಬೆಂಗಳೂರು

### ಉತ್ತಮ ಮನೋವೈಜ್ಞಾನಿಕ ಕಥೆ

ಅಪ್ರಾಪ್ತ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದಂತಹ ಸೂಕ್ಷ್ಮ ವಿಷಯವನ್ನಿಟ್ಟುಕೊಂಡು ಅಚ್ಚುಕಟ್ಟಾಗಿ ಬರೆದ ಕಾದಂಬರಿ. ಮೊದಲನೇ ಕಂತು ಓದಿದ ಕೂಡಲೇ ಕುತೂಹಲ ಗರಿಗೆದರಿ ಮುಂದಿನ ಅಧ್ಯಾಯಗಳಿಗೆ ತುದಿಗಾಲಲ್ಲಿ ಕಾಯುವಂತೆ ಮಾಡುವ ಶೈಲಿಯ ಬರಹ. ಎಲ್ಲಿಯೂ ಅತಿರೇಕಕ್ಕೆ ಒಳಗಾಗದ ಸಂಯಮದ ನಿರೂಪಣೆ. ಕನ್ನಡಕ್ಕೆ ಇದು ಒಂದು ಉತ್ತಮ ಮನೋವೈಜ್ಞಾನಿಕ ಕಥೆ.

–ಶ್ಯಾಮಸುಂದರ ಜಿ., ಚಿಕ್ಕಬಳ್ಳಾಪುರ

### ಪೋಷಕರಿಗೆ ಕಿವಿಮಾತು

ಹತ್ತು ಕಂತುಗಳಲ್ಲಿ ಮೂಡಿಬಂದ ಧಾರಾವಾಹಿಯು ಎಚ್.ಎಸ್. ಮೋನಪ್ಪನವರ ಕಲೆಯಲ್ಲಿ, ಓರ್ವ ಹೆಣ್ಣಿನ ಮಾನಸಿಕ ಒತ್ತಡ ತರುವ ತುಮುಲಗಳನ್ನು ಚೆನ್ನಾಗಿ ನಿರೂಪಿತವಾಗಿದೆ. ಡಾ. ಸಿ.ಆರ್. ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ 1995ರಿಂದ 1999ರವರೆಗಿನ ಅವಧಿಯ ತರಬೇತಿಯಲ್ಲಿ, ಇಂತಹ ಸಂಕಟಕ್ಕೆ ಸಿಲುಕಿದ್ದ ಕೆಲವು ಹೆಣ್ಣುಮಕ್ಕಳ ನೋವಿಗೆ ಸಾಂತ್ವನ ಹೇಳಿದ ಕ್ಷಣಗಳು ನೆನಪಾಯಿತು.

ಈಗಿನ ತಾಂತ್ರಿಕ ಯುಗದಲ್ಲಿ ಪೋಷಕರು ಅವರ ಕೆಲಸದ ಒತ್ತಡದ ಮಧ್ಯೆ ಮಕ್ಕಳ ಕಡೆ ಸರಿಯಾಗಿ ಗಮನ ಹರಿಸುತ್ತಿಲ್ಲ. ಈ ಧಾರಾವಾಹಿಯ ಮೂಲಕ ಪೋಷಕರು ಮಕ್ಕಳು/ಮೊಮ್ಮಕ್ಕಳ ಬಗ್ಗೆ ಸಾಕಷ್ಟು ಗಮನ ಹರಿಸಬೇಕು ಎಂಬ ಸಂದೇಶವನ್ನು ಕಾದಂಬರಿ ಸಾರಿದೆ.

–ಕಮಲಾದೇವಿ ರಾಜಶೇಖರ ಹಳ್ಳೂರ್

### ಮೌಲ್ಯಯುತ ಕಾದಂಬರಿ

ಕಾದಂಬರಿ ಮೌಲ್ಯಯುತವಾಗಿದೆ. ಕೆಲವು ಘಟನೆಗಳನ್ನು ಹೇಳಿಕೊಳ್ಳಲಾಗದೆ ಮನಸ್ಸಿನ ಪದರಗಳಲ್ಲಿ ಕುಳಿತುಕೊಂಡಿರುತ್ತವೆ. ಆದರಿಂದಾಗಿ ಮಾನಸಿಕ ನೆಮ್ಮದಿ ಮತ್ತು ಸ್ಥಿಮಿತವನ್ನು ಕೆಲವೊಮ್ಮೆ ಕಳೆದುಕೊಳ್ಳಬೇಕಾಗಿ ಬರುತ್ತದೆ ಎನ್ನುವುದನ್ನು ಮನದಟ್ಟು ಮಾಡಿಸಿದ ಕಥನ ಚೆನ್ನಾಗಿತ್ತು. ಸಂಗ್ರಹಯೋಗ್ಯ ಧಾರಾವಾಹಿ ಇದು.

–ಕೆ.ಎಸ್. ಪ್ರಭಾಕರಗುಪ್ತ, ಹಾಸನ

### ಕುತೂಹಲ ಕೆರಳಿಸಿದ ಕಥೆ

ಧಾರಾವಾಹಿ ಮನಮುಟ್ಟಿತು. ನೋವಿನ ಆಂತರಿಕ ಕಾರಣಗಳು ಪದರ ಪದರಾಗಿ ಹೊರ ತರುವ ವೈದ್ಯರ ಕಾರ್ಯ ವಿಶ್ಲೇಷಣೆ ಚೆನ್ನಾಗಿ ಬಂದಿದೆ. ಕುತೂಹಲದ ಜೊತೆ ಉತ್ಸಾಹದಿಂದ ಪ್ರತಿವಾರ ಕಾಯುವಂತಿದ್ದ ಧಾರಾವಾಹಿ ಬೇಗ ಮುಗಿದಂತನ್ನಿಸಿತು.

–ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ,
ಅನುರಾಧ ವಿದ್ಯಾರಣ್ಯಪುರ